ಪ್ರಮಾಣ ವಚನ ಬೋಧಿಸಿದ ದಿನಾಂಕ:**15.07.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜೆ. ಕೆ. ವಕೀಲರಿಂದ**

ನಾನು ಮರಳೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ವಾದಿಯು ಭಾಗ ಕೇಳಿ ಈ ಕೇಸನ್ನು ಹಾಕಿದ್ದಾರೆ. ವಾದಿ ಮತ್ತು **1** ನೇ ಪ್ರತಿವಾಯಿ ಅಣ್ಣತಮ್ಮದಿರು ಎಂರದೆ ಸರಿ. ಈ ದವಾೆಯನ್ನು ಸರ್ವೆ ನಂ.**60/4** ರಲ್ಲಿ ಇರುವ **1** ಎಕರೆ **33** ಗುಂಟೆಗೆ ಹಾಕಿದ್ದಾರೆ. ಸದರಿ ಆಸ್ತಿಯು ಹನುಮಂತರಾಯಪ್ಪನವರ ಹೆಸರಿನಲ್ಲಿ ಇತ್ತು. ಈಗೆ ದಾವಾ ಆಸ್ತಿಯ ಖಾತೆಯು **1** ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಈಗ ದಾನ ಪತ್ರದ ಆಧಾರ ಮೇಲೆ ದಾವಾ ಆಸ್ತಿಯ ಖಾತೆಯು **2** ನೇ ಪ್ರತಿವಾದಿಯ ಹೆಸರಿಗೆ ಬದಲಾಗಿದೆ ಎಂದರೆ ಗೊತ್ತಿಲ್ಲ. ನನ್ನ ಜಮೀನು ರಸ್ತೆಯ ಒಂದು ಭಾಗದಲ್ಲಿ ಇದೆ ಹಾಗೂ ದಾವಾ ಆಸ್ತಿಯ ಜಮೀನು ಇನ್ನೊಂದು ಭಾಗದಲ್ಲಿ ಇದೆ. ನಾನು ಮತ್ತು ವಾದಿ ಒಂದೇ ಊರಿನವರು ಮತ್ತು ಜೊತೆಯಲ್ಲಿ ಇರುತ್ತೇವೆ. ವಾದಿಯು ನನ್ನ ಸ್ನೇಹಿತನಾಗಿರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೆನೆಂದರೆ ಸರಿಯಲ್ಲ. ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ವಾದಿಯು ಹನುಮಂತರಾಯಪ್ಪನವರ ದತ್ತು ಮಗ ಎಂದು ತೋರಿಸಲು ನಾನು ದಾಖಲೆಯನ್ನು ನೋಡಿಲ್ಲ ಆದರೆ ಚಿಕ್ಕಮಗುವಿನಿಂದ ಸಾಕಿರುವುದನ್ನು ನೋಡಿದ್ದೇ. ಹನುಮಂತರಾಯಪ್ಪನವರು ಯಾವಾಗ ಮೃತಪಟ್ಟಿದ್ದಾರೆಂದರೆ ಗೊತ್ತಿಲ. ಹನುಮಂತರಾಯಪ್ಪನವರು ಮರಳೇನಹಳ್ಳಿಯವರು. ಈ ಹಿಂದೇಯೇ ವಾದಿ ಮತ್ತು **1** ನೇ ಪ್ರತಿವಾದಿಯ ನಡುವೆ ವಿಭಾಗವಾಗಿದ್ದು, ಅದರಂತೆ ಅವರು ಸ್ವಾಧೀನ ಹೊಂದಿ ಅನುಭವಿಸುತ್ತಿದ್ದಾರೆಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನೀಲಗಿರಿ ಇದೆ. ನೀಲಗಿರಿ ಕಟಾವು ಆಗಿದೆಯಾ? ಎಂದರೆ ಇಲ್ಲ. ಈ ಹಿಂದೆ ವಾದಿ ನೀಲಗಿರಿಯನ್ನು ಕಟಾವು ಮಾಡಿದ್ದರು. ವಾದಿಯೇ ಕಟಾವು ಮಾಡಿದ್ದಾರೆಂದು

ತೋರಿಸಲು ದಾಖಲೆ ಕೊಟ್ಟಿದ್ದೀರಾ? ಎಂದರೆ ಇಲ್ಲ. ಎಂ.ಆರ್ **9/1992-93** ರ ಅದೇಶದ ಪ್ರಕಾರ **1** ನೇ ಪ್ರತಿವಾದಿಗೆ ಸರ್ವೆ ನಂ.**60/4** ರಲ್ಲಿ **1** ಎಕರೆ **21** ಗುಂಟೆ ಭಾಗದ ಖಾತೆಯು ವಿಭಾಗದ ಆಧಾರ ಮೇಲೆ ವರ್ಗಾವಣೆ ಆಗಿದೆ ಎಂದರೆ ಗೊತ್ತಿಲ್ಲ. ಹನುಮಂತರಾಯಪ್ಪನವರು ಯಾವ ಪತ್ರವನ್ನು ವಾದಿಗೆ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.